ಬಿ.ಪ್ಯಾಕ್
ಅಂದದೂರು ಬೆಂಗಳೂರು

ELECTION HABBA
#LetsMakeDemocracyWork

# ಪದ್ಮನಾಭನಗರ

## ನಾಗರಿಕ ಪ್ರಣಾಳಿಕೆ

Mobility & Infrastructure | Waste management | Health | Water & Sanitation | Women & Child | Environment

ಏಪ್ರಿಲ್ 2018

## ಪದ್ಮನಾಭನಗರದ  ಒಳನೋಟ

1. ಪ್ರದೇಶ: 10.5 sq. km

2. ಜನಸಂಖ್ಯೆ : 3063533.

3. ವಾರ್ಡ್ : ಹೊಸಕೇರಹಳ್ಳಿ,  ಗಣೇಶ ಮಂದಿರ, ಕರಿಸಂದ್ರ, ಯೆಡಿಯೂರ್, ಬನಶಂಕರಿ ದೇವಸ್ಥಾನ, ಕುಮಾರಸ್ವಾಮಿ ಲೇಔಟ್,

ಪದ್ಮನಾಭನಗರ ಚಿಕ್ಕಸಂಧ್ರ.

4. ಒಟ್ಟು ಗೃಹಗಳು : 77057

7. ರಸ್ತೆ ವಿಸ್ತೀರ್ಣ :  343km

8)ಕೆರೆಗಳು :ಕರಿಸಂದ್ರ,ಎಡಿಯೂರು ಗೌಡನಪಾಳ್ಯ,ಚಿಕ್ಕಲಸಂದ್ರ, ಇಟ್ಟಮಾಡು

9)ಆರಕ್ಷಕ ಠಾಣೆ : ಗಿರನಗರ ಬನಶಂಕರಿ, ಕೆ.ಎಸ್ ಲೇಔಟ್

10. ಬಸ್ ನಿಲ್ದಾಣಗಳು : 134

11. ಅಗ್ನಿಶಾಮಕ ಕೇಂದ್ರ :0

12. ಸರ್ಕಾರಿ ಶಾಲೆಗಳು :16

13. ಆಟದ ಮೈದಾನ :21

14.ಪಾರ್ಕ್‌ಗಳು: 74

## ಸರಳವಾಗಿ ನಾವು ಕೇಳುವುದಿಷ್ಟೆ

1)ನಾಗರೀಕರು ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುವಂತೆ ನಾಗರಿಕ ಸಂಸ್ಥೆಗಳು ಮಹಾನಗರಪಾಲಿಕೆ ಸದಸ್ಯರು ಮತ್ತು ನಾಗರಿಕ ಗುಂಪುಗಳೊಂದಿಗೆ ಶಾಸಕರು ಮಾಸಿಕ ಸಾಮಾನ್ಯ ಸಭೆ ನೆಡಸಬೇಕು.

2)ಕ್ಷೇತ್ರದ ಅಭಿವೃದ್ಧಿಗಾಗಿ ತೆಗೆದುಕೊಂಡು ಕ್ರಮಗಳು ಮತ್ತು ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿ ಬಳಕೆ ಒಳಗೊಂಡಂತೆ ನಾಗರಿಕ ಬೇಡಿಕೆಗಳಗೆ ಸಂಬಂಧಿಸಿದಂತೆ ನಾಗರಿಕಿರಗೆ ಸೂಕ್ತ ಮಾಹಿತಿಯನ್ನು ಒದಗಿಸಲು ಕ್ಷೇತ್ರದ ವೆಬ್ಸೈಟ್ ವಿನ್ಯಾಸಗೊಳಿಸಬೇಕು.

3)ಚಾಲ್ತಿಯಲಿರುವ ಹಾಗೂ ಮುಂದೆ ಕೈಗೊಳ್ಳ ಬಹುದಾದ ಕಾಮಗರಿಗಳ ಬಗ್ಗೆ ಪಾರದಾರ್ಶಕ ರೀತಿಯಲ್ಲಿ ಸಾರ್ವಜನಿಕರಿಕರೊಂದಿಗೆ ಸಮಾಲೋಚಿಸಲು ಆನ್ ಲೈನ್ ಹಾಗು ಆಫ್ ಲೈನ್ ಮೂಲಕ ಸಂಪರ್ಕ ಹೊಂದಬೇಕು.

4)ವಿಧಾನಸಭೆಯಲ್ಲಿ ಮಂಡಿಸಲಾಗುವ ವಿವಿಧ ನೀತಿ ವಿಷಯಗಳ ಬಗ್ಗೆ ಶಾಸಕರು ತಮ್ಮ ನಿಲುವನ್ನು ವ್ಯಕ್ತಗೊಳಿಸಬೇಕು. ಸಮಸ್ಯಗಳನ್ನು ಆನ್ ಲೈನ್ ಮತ್ತು ಆಫ್ ಲೈನ್ ಮೂಲಕ ನಾಗರಿಕರೊಂದಿಗೆ ಸಮಾಲೋಚಿಸಬೇಕು,

5)ಕ್ಷೇತ್ರದಲ್ಲಿ ಎದುರಾಗುವ ವಿವಿಧ ವಿಷಯಗಳಲ್ಲಿ ಭಾಗವಹಿಸಲು ನಾಗರಿಕರಿಗೆ ಸ್ವಯಂಪ್ರೇರಿತ ಅವಕಾಶಗಳನ್ನು ಕಲ್ಪಿಸಬೇಕು

6) ಕ್ಷೇತ್ರದ ಅಭಿವೃದ್ಧಿಗೆ ಸಂಭಂದಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶವಿರಬೇಕು ಮತ್ತು ಗೃಹಿಣಿಯರು ಮತ್ತು ಹಿರಿಯ ನಾಗರಿಕರ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶಗಳನ್ನು ಕಲ್ಪಿಸಬೇಕು.

7)ಸಂಬಂಧಿತ ಅಧಿಕಾರಿಗಳ ಸಂಪರ್ಕ ವಿವರಗಳು (ಬಿ.ಬಿ.ಎಂ.ಪಿ) ಬೆಸ್ಕಾಂ) ಇತ್ಯಾದಿ ಮತ್ತು ದೂರುಗಳ ಪರಿಹಾರಕ್ಕಾಗಿ ನಿಗದಿಪಡಿಸಲಾಗುವ ಸಮಯದ ವಿವರಗಳನ್ನು ವಾರ್ಡ್ ಕಛೇರಿಯಲ್ಲಿ ಮತ್ತು ಇತರ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಬೇಕು.

8) ಎಲ್ಲಾ ನಾಗರಿಕ ಸಂಸ್ಥೆಗಳ ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯ ಮಾಡಬೇಕು

9) ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಗತಿಯ ತ್ರೈಮಾಸಿಕ ವರದಿ ನಾಗರಿಕರಿಗೆ ಲಭ್ಯವಾಗಬೇಕು

10) ಮೂಲೆ ನಿವೇಶನಗಳು ಹಾಗು ಇತರ ಸೌಲಭ್ಯಗಳ ವಿವರಗಳನ್ನು ಒಳಗೊಂಡ ಕ್ಷೇತ್ರದ ನಕ್ಷೆ ಲಭ್ಯವಾಗುವಂತೆ ಏರ್ಪಾಡು ಮಾಡಬೇಕು

## ಪದ್ಮನಾಭನಗರ

## ಪ್ರಮುಖ 5 ಬೇಡಿಕೆಗಳು

1. ಒಣ ಕಸ ಹಾಗೂ ಹಸಿ ಕಸಕ್ಕೆ ಪ್ರತ್ಯೇಕ ವಾಹನಗಳನ್ನು ಹೊಂದಿರುವಂತೆ ವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ಸಂಗ್ರಹಣೆ. ವಾಹನಗಳಿಗೆ ಜಿಪಿಎಸ್ ಟ್ರ್ಯಾಕರ್ ಅಳವಡಿಸಿರಬೇಕು.

2. ಸಣ್ಣ ವಾಹನಗಳಿಂದ ದೊಡ್ಡ ವಾಹನಗಳಿಗೆ ವರ್ಗಾಯಿಸಲು ಅನುಕೂಲವಾಗುವಂತೆ ವೈಜ್ಞಾನಿಕ ವರ್ಗ ಸ್ಥಳಗಳ ಸ್ಥಾಪನೆ

3. ಪದ್ಮನಾಭನಗರದಿಂದ ಸಂಗ್ರಹಿಸಿದಂತಹ ಹಸಿ ಮತ್ತು ಎಲೆ ಕಸವÀನ್ನು ಪದ್ಮನಾಭನಗರದಲ್ಲೇ ಸಂಸ್ಕರಿಸಲು ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣೆ ವ್ಯವಸ್ಥೆಯಾಗಬೇಕು. ಈ ಪ್ರಕ್ರಿಯೆಯು ನಾಗರೀಕರನ್ನು ಒಳಗೊಂಡಿರಬೇಕು ಮತ್ತು ಈ ಕುರಿತು ಜನರಿಗೆ ಮಾಹಿತಿಯನ್ನು ನೀಡಬೇಕು.

4. ದೇವಸ್ಥಾನಗಳು, ಶಿಕ್ಷಣ ಸಂಸ್ಥೆಗಳು, ರೆಸ್ಟೋರೆಂಟ್‌ಗಳು, ಆಸ್ಪತ್ರೆಗಳು ಮತ್ತು ಇತರೆ ಬೃಹತ್ ಪ್ರಮಾಣದಲ್ಲಿ ಕಸ ಉತ್ಪಾದಿಸುವವರನ್ನು ಶೂನ್ಯ ಕಸದ ಮೂಲವಾಗುವುದಕ್ಕೆ ಉತ್ತೇಜನ ಮತ್ತು ಬೆಂಬಲಿಸಬೇಕು.

5. ಕಣ್ಣಿಗೆ ಗೋಚರಿಸುವಂತಹ ಸ್ವಚ್ಛತೆಯನ್ನು ಆದ್ಯತೆಯಾಗಿಸಿಕೊಳ್ಳಬೇಕು. ಎಲ್ಲಾ ಗಲೀಜು ಪ್ರದೇಶಗಳನ್ನು ಗುರುತಿಸಬೇಕು ಮತ್ತು ಸುಂದರಗೊಳಿಸಲು ಹಾಗೂ ನಿಗಾವಣೆ ವಹಿಸಲು ಕ್ರಮಗಳನ್ನು ಕೈಗೊಳ್ಳಬೇಕು.

## ಸಂಚಾರ ಮತ್ತು ಸಾರಿಗೆ

1. ಒತ್ತುವರಿ ಮುಕ್ತ ಪಾದಚಾರಿ ಸ್ನೇಹಿ ಮತ್ತು ಪ್ರವೇಶಿಸಬಹುದಾದ ಪಾದಚಾರಿ ಮಾರ್ಗ

2. ಲಭ್ಯವಾಗುವಂತಹ ಸಾರ್ವಜನಿಕ ಸಾರಿಗೆ ಮತ್ತು ಮೆಟ್ರೋ ಸ್ಟೇಷನ್‌ನಿಂದ ಕೊನೆಯ ಹಂತದವರೆಗೆ ಸಂಪರ್ಕ ಅವಕಾಶಗಳು

3. ಪದ್ಮನಾಭನಗರದಾದ್ಯಂತ ಕೈಗೊಳ್ಳಲಾಗುತ್ತಿರುವ ರಸ್ತೆ ನಿರ್ಮಾಣ ಕಾಮಗಾರಿ ವಿವರಗಳನ್ನು ಪ್ರಸರಿಸಬೇಕು.

4. ಬನಶಂಕರಿ ದೇವಸ್ಥಾನದ ರಸ್ತೆ, ಉತ್ತರಹಳ್ಳಿ ಮುಖ್ಯರಸ್ತೆ ಮತ್ತು ಇತರ ಪ್ರದೇಶಗಳಲ್ಲಿನ ಅಡಚಣೆಗಳನ್ನು ನಿವಾರಿಸಲು ಮುಖ್ಯರಸ್ತೆಗಳನ್ನು ಮರುವಿನ್ಯಾಸಗೊಳಿಸಬೇಕು.

5. ಸಿಎ ನಿವೇಶನಗಳು, ಸಾರ್ವಜನಿಕ ರಸ್ತೆಗಳು ಮತ್ತು ಇತರೆ ಮಾಹಿತಿಗಳನ್ನೊಳಗೊಂಡ ಕ್ಷೇತ್ರನಕ್ಷೆಯನ್ನು ಪ್ರಕಟಿಸಬೇಕು ಮತು ಇಲ್ಲಿನ ನಿವಾಸಿಗಳಿಗಾಗಿ ಒಳಾಂಗಣ ಕ್ರೀಡಾಂಗಣ, ಸಭಾಂಗಣ ಮತ್ತುತರ ಮೂಲಭೂತ ಮತ್ತು ಸಾಮಾಜಿಕ ಸೌಕರ್ಯಗಳನ್ನು ಕಲ್ಪಿಸಬೇಕು

## ನೀರು

1. ಹೊಸಕೆರೆಹಳ್ಳಿ ಮತ್ತು ಬನಶಂಕರಿ ಸೇರಿದಂತೆ ಕೆಲವು ಪ್ರದೇಶಗಳಿಗೆ ನೀರಿನ ಸರಬರಾಜು ಇರುವುದಿಲ್ಲ. ಪ್ರತಿ ವ್ಯಕ್ತಿಗೆ ದಿನಕ್ಕೆ ಸರಾಸರಿ 90ಲೀಟರ್ಗೆ ಸಮನಾದಷ್ಟು ನೀರನ್ನು ಎಲ್ಲಾ ನಿವಾಸಿಗಳಿಗೆ ಪೂರೈಸಬೇಕು.

2. ಕದಿರೇನಹಳ್ಳಿ ಸರ್ಕಲ್ ಮತ್ತು ಇತರೆ ಕೆಲವು ಪ್ರದೇಶಗಳಲ್ಲಿ ಚರಂಡಿ ನೀರು ಉಕ್ಕಿಹರಿಯುತ್ತಿದ್ದು ಅದನ್ನು ತಡೆಗಟ್ಟಬೇಕಿದೆ.

3. ಕೆರೆ ಒತ್ತುವರಿಯನ್ನು ತಡೆಗಟ್ಟಬೇಕು ಮತ್ತು ಕೆರೆಗಳನ್ನು ಪುನರುಜ್ಜೀವನಗೊಳಿಸಬೇಕು.

4. ವಾರ್ಷಿಕ ನಿರ್ವಹಣಾ ವೆಚ್ಚವನ್ನು ನಿಗದಿಪಡಿಸಬೇಕು ಮತ್ತು ಎಲ್ಲಾ ಆರ್ಒ ಶುದ್ಧ ನೀರಿನ ಘಟಕಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿವೆ ಎಂಬುದನ್ನು ಖಾತ್ರಿಪಡಿಸಬೇಕು.

5. ಜಲ ಸಂರಕ್ಷಣೆಗೆ ಜಲವೈಜ್ಞಾನಿಕ ಅಧ್ಯಯನವೊಂದನ್ನು ನಡೆಸಬೇಕು ಮತ್ತು ಭೂಪ್ರದೇಶ ಮಾದರಿಯೊಂದನ್ನು ರಚಿಸಬೇಕಿದೆ. ಎಲ್ಲಾ ಸಾರ್ವಜನಿಕ ಕಟ್ಟಡಗಳು ಮತ್ತು ಜಾಗಗಳಲ್ಲಿ ಮಳೆಕೊಯ್ಲು ಮಾಡಬೇಕು.

## ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ

1. ಎಲ್ಲಾ ವಾರ್ಡ್‌ಗಳಲ್ಲೂ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯ ಮತ್ತು ಕಲಿಕಾ ಫಲಿತಾಂಶಗಳನ್ನೊಳಗೊಂಡ ಕನಿಷ್ಠ ಒಂದು ಮಾದರಿ ಸರ್ಕಾರಿ ಶಾಲೆ ಇರಬೇಕು.

2. ತೊಂದರೆಗಳನ್ನು ನಿವಾರಿಸಲು ಸಾರ್ವಜನಿಕ ಜಾಗಗಳಲ್ಲಿ ಉತ್ತಮ ಬೆಳಕಿನ ವ್ಯವಸ್ಥೆ, ಪಾದಚಾರಿ ಮಾರ್ಗಗಳ ಲಭ್ಯತೆ, ಸಾಕಷ್ಟು ಪೊಲೀಸ್ ಗಸ್ತು ತಿರುಗುವಿಕೆ ಮತ್ತು ಸಿಸಿಟಿವಿಗಳ ವ್ಯವಸ್ಥೆಯಂತಹ ಕ್ರಮಗಳ ಜಾರಿ

3. ವಿವಿಧ ರೀತಿಯ ಆದಾಯ ಗುಂಪುಗಳಲ್ಲಿನ ಮಹಿಳೆಯರಿಗೆ ಸುರಕ್ಷತೆ ಮತ್ತು ಸಬಲೀಕರಣ ಸಂಪನ್ಮೂಲದ ಕುರಿತು ಜಾಗೃತಿ ಮೂಡಿಸುವುದು

4. ವೃತ್ತಿಜೀವನ ನಿರ್ಮಾಣ ಅವಕಾಶಗಳಿಗಾಗಿ ಯುವ ಕಾಲೇಜು ವಿದ್ಯಾರ್ಥಿಗಳು, ಯುವ ಮಹಿಳೆಯರು ಮತ್ತು ವಿಕಲಚೇತನರ ಮೇಲೆ ವಿಶೇಷ ಗಮನ

5. ಅಪರಾಧ ಗುರುತಿಸುವಿಕೆ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಅಪರಾಧ ತಡೆಗಟ್ಟುವಿಕೆ ಮತ್ತು ತೊಂದರೆ ನಿವಾರಿಸುವ ಕ್ರಮದ ಅಂಗವಾಗಿ ವ್ಯಕ್ತಿಗಳು ಮತ್ತು ನೆರೆಹೊರೆಯನ್ನು ಗಮನಿಸುವ ಕಾರ್ಯಕ್ರಮಗಳನ್ನು ಪರಿಚಯಿಸುವುದು / ಪರಿಷ್ಕರಿಸುವುದು.

## ಪರಿಸರ ಮತ್ತು ಆರೋಗ್ಯ

1. ಉದ್ಯಾನವನಗಳಲ್ಲಿ ಸಲಕರಣೆಗಳನ್ನು ನಿರ್ವಹಿಸಬೇಕು. ಪಾರ್ಕ್‌ಗಳಲ್ಲಿ ರಕ್ಷಣೆ, ಶೌಚಾಲಯ, ಕುಡಿಯುವ ನೀರು ಮತ್ತು ಪ್ರಥಮ ಚಿಕಿತ್ಸೆಯಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು.

2. ಹಸಿರು ಹೊದಿಕೆ (ವೈಜ್ಞಾನಿಕ ರೀತ್ಯಾ ಮರ ಕತ್ತರಿಸುವಿಕೆ) ಮತ್ತು ಬಯಲು ಪ್ರದೇಶಗಳ ನಿಗಾವಣೆ ಮತ್ತು ನಿರ್ವಹಣೆ

3. ಡೆಂಗ್ಯೂ ಮತ್ತು ಇತರೆ ರೋಗಗಳನ್ನು ತಡೆಗಟ್ಟಲು ನಿರೋಧಕ ಆರೋಗ್ಯ ರಕ್ಷಣೆ ಕ್ರಮಗಳು

4. ಕ್ಷೇತ್ರದಾದ್ಯಂತ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ರೋಗ ಪತ್ತೆಹಚ್ಚುವ ಕೇಂದ್ರಗಳು

5. ವಾಯು ಗುಣಮಟ್ಟ ಮತ್ತು ಗದ್ದಲ ಪ್ರಮಾಣ ನಿಗಾವಣೆ ಸೂಚಕಗಳನ್ನು ಅಳವಡಿಸುವುದು.